
ಕೂಡ ಅದೆಷ್ಟು ಜನರನ್ನು ಧನ್ಯವಾಗಿಸಿತೋ, ಬಲ್ಲವರಾರು! ಇನ್ನು ಅವರನ್ನು ಹತ್ತಿರದಿಂದ ಕಂಡ, ಅವರ ಸಂಪರ್ಕಕ್ಕೆ ಬಂದ ಭಾಗ್ಯಶಾಲಿಗಳ ಪವಿತ್ರ ಅನುಭವಗಳನ್ನು ಮಾತುಗಳ ಮೂಲಕ ವರ್ಣಿಸಲಾಗುವುದಿಲ್ಲ.

## ಛಾಯಾಚಿತ್ರ – ೩೮

ಒಬ್ಬ ಶ್ರೀಮಂತ ಭಕ್ತ ಸ್ವಾಮೀಜಿಯವರನ್ನು ಖ್ಯಾತ ಹಸ್ತ ಸಾಮುದ್ರಿಕ ಶಾಸ್ತ್ರಜ್ಞೆಯಾಗಿದ್ದ ಚೀರೋ ಎಂಬಾಕೆಯ ಕಡೆ ಕರೆದುಕೊಂಡು ಹೋದ. ಆಗ, ಸ್ವಾಮೀಜಿಯವರ ಹಸ್ತದ ಪ್ರತಿಯೊಂದನ್ನು ತೆಗೆದು, ಸಾಮುದ್ರಿಕ ಶಾಸ್ತ್ರದ ಪ್ರಕಾರ ಅದರ ವಿವರಣೆಯನ್ನು ಚೀರೋ ನೀಡಿರಬೇಕು ಎಂದೆನಿಸುತ್ತದೆ. ಈ ಪ್ರತಿಯಲ್ಲಿ ಸ್ವಾಮೀಜಿಯವರ ಹಸ್ತಾಕ್ಷರ ಮತ್ತು ದಿನಾಂಕ, 'ಏಪ್ರಿಲ್ ೬, ೧೮೯೫' ಎಂದು ಇಂಗ್ಲಿಷ್‌ನಲ್ಲಿ ನಮೂದಿಸಲಾಗಿದೆ.

ಈ ಹಸ್ತ ಚಿತ್ರ ಚೀರೋ ಅವರು ಬರೆದ Langauage of the Hand ಕೃತಿಯಲ್ಲಿ ಮೊದಲು ಪ್ರಕಟವಾಗಿತ್ತು. ಅದರಲ್ಲಿನ ವಿವರಗಳನ್ನು ತಿಳಿಯಲು, ಪುಸ್ತಕದ ಆ ಅವತರಣಿಕೆಯ ಪ್ರತಿಯೊಂದನ್ನು ಹುಡುಕುವ ಪ್ರಯತ್ನಗಳೆಲ್ಲವೂ ವಿಫಲವಾಗಿವೆ.




ಚಿತ್ರ : ೩೮

## ಛಾಯಾಚಿತ್ರ – ೩೯

ನ್ಯೂಯಾರ್ಕ್‌ನಿಂದ ಸುಮಾರು ೩೦೦ ಮೈಲಿ ದೂರದಲ್ಲಿ, ಸೇಂಟ್ ಲಾರೆನ್ಸ್ ನದಿಯು ಆಂಟೇರಿಯೋ ಸರೋವರವನ್ನು ಸೇರುವಲ್ಲಿ, ಸಹಸ್ರದ್ವೀಪೋದ್ಯಾನ (Thousand Island Park) ಎಂಬ ದ್ವೀಪಸಮುದಾಯವಿದೆ. ವೇದಾಂತವನ್ನು ಆಳವಾಗಿ ಅಧ್ಯಯನ ಮತ್ತು ಅನುಷ್ಠಾನ ಮಾಡಲು ಆಸಕ್ತಿಯಿರುವ



ಚಿತ್ರ : ೩೯

ಶಿಷ್ಯರಿಗೆ, ಸ್ವಾಮೀಜಿ ೧೮೯೫ರ ಜೂನ್‌ನಲ್ಲಿ ಇಲ್ಲಿ ಒಂದು ಶಿಬಿರವನ್ನು ನಡೆಸಿದರು. ಈ ಶಿಬಿರದ ತರಗತಿಗಳ ಟಿಪ್ಪಣಿಗಳನ್ನು ಮಿಸ್ ಎಲೆನ್ ವಾಲ್ಡೋ ಗುರುತುಹಾಕಿಕೊಂಡಳು. ಅದೇ ಮುಂದೆ 'ಸ್ಫೂರ್ತಿವಾಣಿ' (Inspired Talks) ಎಂಬ ಹೆಸರಿನಲ್ಲಿ ಪ್ರಕಟವಾದುವು.

ಒಂದು ದಿನ ಬೆಳಗ್ಗೆ ಸ್ವಾಮೀಜಿ ನಡೆದಾಡುತ್ತಿದ್ದರು. ಹಾಗೆ ಹೋಗುವಾಗ ಒಮ್ಮೆ ಆ ಹಳ್ಳಿಯಲ್ಲಿದ್ದ ಸ್ಟುಡಿಯೋ ಹತ್ತಿರ ಬಂದರು. ಆಗ ಶಿಷ್ಯರ ಒತ್ತಾಯದ ಮೇರೆಗೆ, ಸ್ವಾಮೀಜಿಯವರ ಎರಡು ಚಿತ್ರಗಳನ್ನು ತೆಗೆಯಲಾಯಿತು. ಅವುಗಳಲ್ಲಿ ಮೊದಲನೆಯದೇ ಈ ಚಿತ್ರ.

ಇಲ್ಲಿ ನದಿಯ ಚಿತ್ರದ ಹಿನ್ನೆಲೆ ಇದೆ. ಸ್ವಾಮೀಜಿ ಕೈಯನ್ನು ಹಿಂದಕ್ಕೆ ಕಟ್ಟಿಕೊಂಡು, ದಿಗಂತವನ್ನು ವೀಕ್ಷಿಸುತ್ತಾ, ಗಾಂಭೀರ್ಯದಿಂದ ನಿಂತುಕೊಂಡಿದ್ದಾರೆ. ಒಟ್ಟಿನಲ್ಲಿ ಇದು ಬಹಳ ಸುಂದರವಾದ ಚಿತ್ರ.

⌘

# ಸ್ವಾಮಿ ವಿವೇಕಾನಂದರು ಮತ್ತು ಅಭಿವೃದ್ಧಿ ಕಾರ್ಯ

ಜಿ.ಎಸ್. ಜಯದೇವ




ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ದೇವರ ಸೇವೆಯ ಬಗ್ಗೆ ಅನೇಕ ಆಚರಣೆಗಳಿದ್ದರೂ ರೋಗಿಗಳಿಗೆ, ದುರ್ಬಲರಿಗೆ, ತುಳಿತಕ್ಕೆ ಒಳಗಾದವರಿಗೆ ಸಲ್ಲಿಸಬಹುದಾದ ಸೇವೆಯ ಬಗ್ಗೆ ಅಂತಹ ಉಲ್ಲೇಖಗಳಿಲ್ಲ. ನಾಗರಿಕತೆಯ ಮುಂಚಿನ ದಿನಗಳಲ್ಲಿ ಜನಸಂಖ್ಯೆ ಕಡಿಮೆ ಇದ್ದು, ಅಪಾರವಾದ ಪ್ರಕೃತಿ ಸಂಪತ್ತು ಎಲ್ಲರ ಭೌತಿಕ ಆವಶ್ಯಕತೆಗಳನ್ನು ಪೂರೈಸುತ್ತಿತ್ತು. ಆದ್ದರಿಂದ ಸೇವೆಯನ್ನು ಒಂದು ವ್ರತದೋಪಾದಿಯಲ್ಲಿ ಆಚರಿಸುವ ಪ್ರಮೇಯ ಇರಲಿಲ್ಲ. ಆದರೆ ಜನಸಂಖ್ಯೆ ಹೆಚ್ಚಾದಂತೆ ಸಂಪತ್ತಿನ ಸಾಮೂಹಿಕ ಒಡೆತನ ಬದಲಾಗಿ, ರಾಜರ ಆಳ್ವಿಕೆಯ ಸಮಾಜ ಹುಟ್ಟಿತು. ಜೊತೆಗೆ ದುರ್ಬಲರನ್ನು ಅಂಚಿಗೆ ತಳ್ಳುವುದರ ಮೂಲಕ ಶ್ರೇಣೀಕೃತ ಸಮಾಜ ಹುಟ್ಟಿತು. ಹೀಗೆ ದುರ್ಬಲರು, ತುಳಿತಕ್ಕೆ ಒಳಗಾದವರು ಅಜ್ಞಾನದಿಂದ ನರಳುತ್ತ ಸಮಾಜದ ಸಮಾನ ಅವಕಾಶಗಳಿಂದ ವಂಚಿತರಾದರು. ಇವರು ಪ್ರತಿಷ್ಠಿತ ವರ್ಗದವರ ಆಶೋತ್ತರಗಳ ಈಡೇರಿಕೆಯಲ್ಲಿ ಮಾತ್ರ ತಮ್ಮ ಜೀವನದ ಅರ್ಥವನ್ನು ಕಾಣುವ ಪರಿಸ್ಥಿತಿ ಬಂತು. ಹೀಗೆ ಸಾಮಾಜಿಕ ತಾರತಮ್ಯದಿಂದ ತುಳಿತಕ್ಕೆ ಒಳಗಾದವರ ಸಂಖ್ಯೆ ಹೆಚ್ಚಿತು. ಹೀಗಾಗಿ ಸುಂದರವಾದ ನ್ಯಾಯನಿಷ್ಠ ಸಮಾಜದ ಕನಸು ಕಾಣುವವರಿಗೆ ಅಭಿವೃದ್ಧಿ ಕಾರ್ಯ ಅನಿವಾರ್ಯವಾಯಿತು.

ಸ್ವಾಮಿ ವಿವೇಕಾನಂದರ ಆಗಮನಕ್ಕೆ ಮೊದಲು, 'ಅಭಿವೃದ್ಧಿ' ಎಂಬುದು 'ಉಳ್ಳವರು ಇಲ್ಲದವರಿಗೆ ಕೊಡುವ ದಾನ ಧರ್ಮ'ದ ರೂಪವನ್ನು ಮಾತ್ರ ಪಡೆದಿತ್ತು. ದಾನ ಮಾಡುವುದು ಪುಣ್ಯ ಸಂಪಾದನೆಯ ಮಾರ್ಗ; ಈ ಪ್ರಕ್ರಿಯೆಯಲ್ಲಿ ಕೊಡುಗೆದಾನಿಯನ್ನು ವೈಭವೀಕರಿಸಲಾಗುತ್ತಿತ್ತು; ಪಡೆಯುವವನು ನಿರಂತರವಾದ ಕರುಣೆಗೆ, ಅನುಕಂಪಕ್ಕೆ ಮಾತ್ರ ಪಾತ್ರನಾಗಿದ್ದನು. ಆದರೆ ಸ್ವಾಮಿ ವಿವೇಕಾನಂದರ ಆಗಮನದಿಂದ 'ಸೇವೆ' ಮತ್ತು 'ಅಭಿವೃದ್ಧಿ' ಗಳು ದಾನಧರ್ಮಗಳ ಸಂಕುಚಿತ ಅರ್ಥದಿಂದ ಬಿಡುಗಡೆಹೊಂದಿ, ಒಂದು ಸಾಮಾಜಿಕ ಆಂದೋಲನದ ಆಯಾಮ ಪಡೆದವು. ಕೊಡುವವನಿಗಿಂತ ಪಡೆಯುವವನೇ ಪ್ರಮುಖನಾದ; ಗೌರವಾರ್ಹನಾದ; ಶತಮಾನಗಳ ತುಳಿತದಿಂದ ನಾಶವಾಗಿದ್ದ ತನ್ನ ಸ್ವಂತ ವ್ಯಕ್ತಿತ್ವವನ್ನು, ಆತ್ಮಾಭಿಮಾನವನ್ನು ಮರಳಿ ಪಡೆಯುವಂತಾದ. ೧೨ನೇ ಶತಮಾನದ ಶಿವಶರಣರ ಕಲ್ಯಾಣ ಕ್ರಾಂತಿಯ ಕಾಲದಲ್ಲೂ, ಇಂತಹ ಪ್ರಗತಿಪರ ಸಾಮಾಜಿಕ ಬದಲಾವಣೆಯಾದದ್ದನ್ನು ನಾವು ಕಾಣಬಹುದು. ತುಳಿತಕ್ಕೆ ಒಳಗಾದವರಿಗೆ, ದುರ್ಬಲರಿಗೆ ಸಮಾಜದಲ್ಲಿ ಸಮಾನ ಸ್ಥಾನ ಮಾನವನ್ನು ದೊರಕಿಸಿಕೊಟ್ಟ ಇಂತಹ ಶರಣರ ಸಮಾಜಕ್ರಾಂತಿ ಬಹುಶಃ ಪ್ರಪಂಚದ ಮತ್ತಾವುದೇ ಇತಿಹಾಸದ ಪುಟಗಳಲ್ಲಿ ನಮಗೆ ದೊರೆಯಲಾರದು. ಆದರೆ ಸ್ವಾಮೀಜಿಯವರ ಕಾಲ ಮಾನದ ವೇಳೆಗೆ ಈ ಸಮಸ್ಯೆ ಪುನಃ ಉಲ್ಬಣಗೊಂಡಿತ್ತು. ಅವರು ಈ ಪ್ರಗತಿಪರ ಅಭಿವೃದ್ಧಿ ಪಥವನ್ನು ರಾಷ್ಟ್ರವ್ಯಾಪಿ ಆಂದೋಳನ ವನ್ನಾಗಿಸಿ ರೂಪಿಸಿದರು.

ಸ್ವಾಮೀಜಿಯವರು ಚರಿತ್ರೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಹಾಗೆಯೇ ಅವರಿಗೆ ಭಾರತೀಯ ಜನಜೀವನದ ಮೇಲೆ ಪ್ರಭಾವ ಬೀರಿದ ಪ್ರತಿಗಾಮಿ ಹಾಗೂ ಪುರೋಗಾಮಿ ಚಿಂತನೆಗಳ ಬಗ್ಗೆ ಸ್ಪಷ್ಟವಾದ ಅರಿವಿತ್ತು. ಇಡೀ ರಾಷ್ಟ್ರವನ್ನು ಪರಿವ್ರಾಜಕರಾಗಿ ಸುತ್ತಿ ಅದರ ನರನಾಡಿಗಳನ್ನೆಲ್ಲ ಅವರು ಅರಿತಿದ್ದರು. ಸಾಲದೆಂಬಂತೆ, ಅಭಿವೃದ್ಧಿ ಸಾಧಿಸುತ್ತಿದ್ದ ಅಮೆರಿಕಾ, ಬ್ರಿಟನ್ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳನ್ನೂ ಸುತ್ತಿ ಆಯಾ ದೇಶಗಳವರ ಸಫಲತೆಗೆ ಕಾರಣವನ್ನೂ ಸ್ವಾಮೀಜಿ ಕಂಡುಕೊಂಡರು. ಈ ಸಮಗ್ರ ಅನುಭವದ ಹಿನ್ನೆಲೆಯಲ್ಲಿ ಸ್ವಾಮೀಜಿಯವರು ದೂರದೃಷ್ಟಿಯುಳ್ಳ ವೈಜ್ಞಾನಿಕವಾದ ಕೆಲವು ಅಭಿವೃದ್ಧಿ ಸೂತ್ರಗಳನ್ನು ರಾಷ್ಟ್ರದ ಜನತೆಗೆ ನೀಡಿದರು. ಈ ಅಭಿವೃದ್ಧಿ ಕಾರ್ಯಕ್ಕಾಗಿ ಮಾಡಬೇಕಾದ ಎಲ್ಲ ಬಗೆಯ ತ್ಯಾಗವನ್ನು, ಸಂಘಟನೆಯನ್ನು, ನಿಸ್ವಾರ್ಥಶ್ರಮವನ್ನು ಗುರುತಿಸಿ ಅನುಸರಿಸಿದ ಸ್ವಾಮೀಜಿಯವರು, ನಮ್ಮ ಅವನತಿಗೆ ಕಾರಣ ಮತ್ತು ಅದಕ್ಕೆ ಪರಿಹಾರೋಪಾಯಗಳೆರಡನ್ನೂ ಸಮರ್ಪಕವಾಗಿ ಸೂಚಿಸಿದರು. ಈ ನಿಟ್ಟಿನಲ್ಲಿ, ಸ್ವಾಮೀಜಿಯವರು ನೀಡಿದ ಅಭಿವೃದ್ಧಿ ಸೂತ್ರಗಳನ್ನು ಈಗ ಪರಿಶೀಲಿಸೋಣ.

**ಶ್ರೀಸಾಮಾನ್ಯನನ್ನು ಕಡೆಗಣಿಸಿದ ಫಲ (Neglect of the Masses):** ಇತರ ದೇಶಗಳಿಗೆ ಹೋಲಿಸಿದರೆ ಭಾರತವು ಅದ್ಭುತವಾದ ಪ್ರಕೃತಿ ಸಂಪತ್ತನ್ನು ಹೊಂದಿರುವ ದೇಶ. ಫಲವತ್ತಾದ ಭೂಮಿ, ನದಿಗಳು, ಸೂರ್ಯನ ಬೆಳಕು, ಶಾಖ, ಜೊತೆಗೆ ಅಪಾರ ಜನಸಂಖ್ಯೆಯ ಮಾನವ ಸಂಪತ್ತನ್ನು ಇದು ಹೊಂದಿದೆ. ಇಂತಹ ಶ್ರೀಮಂತ ಪ್ರಕೃತಿಯ ನಡುವೆಯೂ ಬಡತನವನ್ನು ಅನುಭವಿಸುವುದು ಒಂದು ಸ್ವಯಂಕೃತ ಅಪರಾಧವೇ ಸರಿ.

ಅದಕ್ಕಾಗಿಯೇ ಸ್ವಾಮೀಜಿ ಹೇಳುತ್ತಾರೆ: "ಬಡಜನರನ್ನು ಕಡೆಗಣಿಸಿರುವುದೇ ನಮ್ಮ ಬಹುದೊಡ್ಡ ರಾಷ್ಟ್ರೀಯ ಪಾಪವೆಂದು ನಾನು ಪರಿಗಣಿಸುತ್ತೇನೆ. ಅದು ನಮ್ಮ ಅವನತಿಯ ಕಾರಣಗಳಲ್ಲಿ ಒಂದಾಗಿದೆ."

ನಾವು ನಮ್ಮ ಅಪೂರ್ವವಾದ ಮಾನವ ಸಂಪನ್ಮೂಲವನ್ನು ಜಾತಿ, ಅಸ್ಪೃಶ್ಯತೆ ಹಾಗೂ ಪುರೋಹಿತಶಾಹಿ ದಬ್ಬಾಳಿಕೆಗಳ ಮೂಲಕ ಸತ್ವಹೀನವಾಗಿಸುವಲ್ಲಿ ಸಫಲವಾಗಿದ್ದೇವೆ. ಕೆಲವರು ಪ್ರತಿಷ್ಠಿತರಾಗುವ ಭರದಲ್ಲಿ ಅನೇಕರು ಆತ್ಮಗೌರವ ಕಳೆದುಕೊಂಡು ಪ್ರತಿಷ್ಠಿತರ ವೈಭವಕ್ಕೆ ಮೆರುಗು ಹಚ್ಚಬೇಕಾಗಿದೆ. ಆತ್ಮಗೌರವ ಕಳೆದುಕೊಂಡ ಕೀಳರಿಮೆಯೇ ನಮ್ಮ ಜನಸಾಮಾನ್ಯರ ಈ ದುರಂತ ಸ್ಥಿತಿಗೆ ಕಾರಣ. ಇದನ್ನು ಸ್ವಾಮೀಜಿ ಚೆನ್ನಾಗಿ ಗುರುತಿಸಿದರು. ಈ ಕೀಳರಿಮೆಗೆ ಕಾರಣ ಶ್ರೀಸಾಮಾನ್ಯನು ತನ್ನ ಕ್ರಿಯಾಶೀಲತೆಯನ್ನು ಮತ್ತು ಬದುಕಿನಲ್ಲಿ ಅತ್ಯುತ್ತಮವಾದದ್ದನ್ನು ಸಾಧಿಸಬಹುದೆಂಬ ಭರವಸೆಯನ್ನು ಕಳೆದುಕೊಂಡದ್ದು. ಸ್ವಾಮೀಜಿ ಈ ಬಗ್ಗೆ ಹೀಗೆ ಹೇಳುತ್ತಾರೆ: "ನಿಜವಾದ ದೇಶ ಗುಡಿಸಲುಗಳಲ್ಲಿದೆ. ಆದರೆ ಅಲ್ಲಿ ವಾಸಮಾಡುವವರು ತಮ್ಮ ಪೌರುಷತನವನ್ನು ಹಾಗೂ ಸ್ವಂತ ವ್ಯಕ್ತಿತ್ವವನ್ನು ಮರೆತುಬಿಟ್ಟಿದ್ದಾರೆ." ಇದರಿಂದಾಗಿ, ಸಂಕುಚಿತ ಮನೋಭಾವನೆ ಮತ್ತು ಅದರಿಂದ ಹುಟ್ಟುವ ಅಸೂಯೆ ನಮ್ಮ ರಾಷ್ಟ್ರೀಯ ಗುಣಧರ್ಮಗಳಾಗಿ ಬಿಟ್ಟವು. ನಮ್ಮ ಮಾನವ ಸಂಪನ್ಮೂಲದಲ್ಲಿದ್ದ ಈ ಮೂಲಭೂತ ನ್ಯೂನತೆಯನ್ನು ಸ್ವಾಮೀಜಿ ಚೆನ್ನಾಗಿ ಗುರುತಿಸಿದರು. ಆದ್ದರಿಂದ ಸ್ವಾಮೀಜಿಯವರ ಪ್ರಕಾರ, 'ಸಮಾಜಸೇವೆ' ಎಂಬುದು ಆತ್ಮಗೌರವ ಕಳೆದುಕೊಂಡು ನಿಷ್ಕ್ರಿಯರಾದ ಶ್ರೀಸಾಮಾನ್ಯನಿಗೆ ಆತ್ಮಗೌರವ ಮರಳಿ ಪಡೆಯಲು ಸಹಾಯ ಮಾಡುವುದು, ಅವನನ್ನು ಕ್ರಿಯಾಶೀಲನನ್ನಾಗಿ ಮಾಡುವುದು, ಅವನಿಗೆ ಜೀವನದ ಉದಾತ್ತ ಧ್ಯೇಯಗಳಲ್ಲಿ ಭರವಸೆ ಮೂಡಿಸುವುದು. ಈ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ: **"ದೇಶವು ಗುಡಿಸಲುಗಳಲ್ಲಿದೆ ಎಂಬುದನ್ನು ನೆನಪಿಡು. ಆದರೆ ಅಲ್ಲಿನ ಜನರಿಗೆ ಯಾರೂ ಏನನ್ನೂ ಮಾಡುತ್ತಿಲ್ಲವೇ? ಅವರಲ್ಲಿ ಅಂತರ್ಗತವಾಗಿರುವ ಆಧ್ಯಾತ್ಮಿಕತೆಯು ನಷ್ಟವಾಗದಂತೆ, ಅವರು ಕಳೆದುಕೊಂಡ ವ್ಯಕ್ತಿತ್ವವನ್ನು ನೀವು ಮರಳಿ ತರಬಲ್ಲಿರಾ?"**

**ಸಂಸ್ಕೃತಿ ಮತ್ತು ಅಭಿವೃದ್ಧಿ:** ಸ್ವಾಮೀಜಿಯವರ ಮೇಲಿನ ಮಾತುಗಳಲ್ಲಿ ಗಮನಿಸಬೇಕಾದ ಎರಡು ಮುಖ್ಯ ಅಂಶಗಳಿವೆ. ಮೊದಲನೆಯದು ಶ್ರೀಸಾಮಾನ್ಯನು ಕಳೆದುಕೊಂಡ ವ್ಯಕ್ತಿತ್ವವನ್ನು ಮರಳಿಪಡೆಯಲು ಅನುವು ಮಾಡಿಕೊಡುವುದು. ಎರಡನೆಯದು ಅವನು ಮರಳಿಪಡೆಯುವ ವ್ಯಕ್ತಿತ್ವವು ಅವನ ಆಂತರ್ಯದಲ್ಲಿ ನೆಲೆಗೊಂಡಿರುವ ಆಧ್ಯಾತ್ಮಿಕತೆಗೆ ಪೂರಕವಾಗಿರುವಂತೆ ಎಚ್ಚರಿಕೆ ವಹಿಸುವುದು. ಏಕೆಂದರೆ, ಆಧ್ಯಾತ್ಮಿಕ ಪ್ರವೃತ್ತಿ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ಅಭಿವೃದ್ಧಿ ನಮ್ಮ ಸಂಸ್ಕೃತಿಯನ್ನು ಆಧರಿಸಿರಬೇಕು ಎಂಬುದನ್ನು ಸ್ವಾಮೀಜಿ ಸ್ಪಷ್ಟವಾಗಿ ವಿವರಿಸುತ್ತಾರೆ. ಅಭಿವೃದ್ಧಿಯ ಭರದಲ್ಲಿ ಅನ್ಯ ಸಂಸ್ಕೃತಿಯ ಅನುಕರಣೆಯ ವ್ಯಕ್ತಿತ್ವ ರೂಪಿಸಿಕೊಂಡು ಮೇಲ್ನೋಟಕ್ಕೆ ಆತ್ಮವಿಶ್ವಾಸದಿಂದ ಬೀಗುವ ಅನೇಕರು ನಮ್ಮ ನಡುವೆ ಇದ್ದಾರೆ. ಆದರೆ ಈ ಆತ್ಮವಿಶ್ವಾಸ ಒಂದು ಹುಸಿ ಸಂಸ್ಕೃತಿಯ ಮರಳಿನ ಮೇಲೆ ಕಟ್ಟಿದ ಥಳುಕಿನ ಸೌಧದಂತೆ. ಅದರಲ್ಲಿ ಆಳವಿಲ್ಲ, ಭದ್ರತೆಯೂ ಇಲ್ಲ. ಭಾರತೀಯರು ಪಡೆಯಬೇಕಾದ ಆತ್ಮವಿಶ್ವಾಸ ಆತ್ಮಸ್ಥೈರ್ಯಗಳು ನಮ್ಮ ಪರಂಪರೆಯ ಮತ್ತು ಸಂಸ್ಕೃತಿಯ ಸಕಾರಾತ್ಮಕ ಅಂಶಗಳಿಂದ ಪಡೆದವುಗಳಾಗಿರಬೇಕು. ಅಷ್ಟೇ ಅಲ್ಲ, ನಮ್ಮ ಸಂಸ್ಕೃತಿಯಲ್ಲಿ ದುರದೃಷ್ಟವಶಾತ್ ಹೆಣೆದುಕೊಂಡಿರುವ ಪ್ರತಿಗಾಮಿ ಧೋರಣೆಗಳನ್ನು ಖಂಡಿಸುವ ಆತ್ಮವಿಶ್ವಾಸವನ್ನೂ ಅದು ನೀಡಬೇಕು. ಸ್ವಾಮೀಜಿಯವರ ವ್ಯಕ್ತಿತ್ವದಲ್ಲಿ ಇದನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ.

ಇಂದಿನ ಜಾಗತೀಕರಣದ ಭರದಲ್ಲಿ ನಾವು ಕಾಣುತ್ತಿರುವ ಅಭಿವೃದ್ಧಿ ಹೇಗೆ ಅನ್ಯ ಸಂಸ್ಕೃತಿಯ ಅನುಕರಣೆಯಾಗಿದೆ ಎಂಬುದನ್ನು ಇತ್ತೀಚೆಗೆ ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಸ್ವಾಮೀಜಿಯವರು ನೂರಕ್ಕೂ ಹೆಚ್ಚು ವರ್ಷಗಳ ಹಿಂದೆಯೇ ಈ ಬಗ್ಗೆ ನಮ್ಮನ್ನು ಎಚ್ಚರಿಸಿದ್ದರು. ಅನ್ಯಸಂಸ್ಕೃತಿಗಳಿಂದ ಒಳಿತನ್ನು ಪಡೆಯುವ ಬಗ್ಗೆ ಸ್ವಾಮೀಜಿಯವರ ಅಭ್ಯಂತರವಿರಲಿಲ್ಲ. ಅವರು ಹೇಳುತ್ತಾರೆ, "ನಾವು ನೆನಪಿನಲ್ಲಿಡಬೇಕಾದ ಇನ್ನೊಂದು ಮಹತ್ವದ ಪಾಠವಿದೆ. ಅದೆಂದರೆ ಅನುಕರಣೆಯು ಎಂದಿಗೂ ನಾಗರಿಕತೆಯಾಗದು ಎಂಬುದು... ಅನುಕರಣೆಯೆಂಬುದು ಮಾನವನ ಕೀಳು ಅವನತಿಯ ಸಂಕೇತವಾಗಿದೆ... ಇತರರಲ್ಲಿ ಕಂಡುಬರುವ ಒಳಿತೆಲ್ಲವನ್ನೂ ಕಲಿತುಕೊ, ಆದರೆ ಅವುಗಳನ್ನು ಒಳಕ್ಕೆ ತಂದುಕೊಂಡು, ನಿನ್ನದೇ ಆದ ರೀತಿಯಲ್ಲಿ ಅಂತರ್ಗತವನ್ನಾಗಿ ಮಾಡಿಕೋ. ಅದನ್ನು ಬಿಟ್ಟು ಇತರರಂತೆ ಆಗಿಬಿಡಬೇಡ. ಈ ಭಾರತೀಯ ಜೀವನದಿಂದ ಹೊರಕ್ಕೆ ಎಳೆಯಲ್ಪಡದಿರು; ಎಲ್ಲ ಭಾರತೀಯರೂ ಬೇರೊಂದು ಜನಾಂಗದವರಂತೆ ಆಹಾರ ಸೇವಿಸಿದರೆ, ಅವರಂತೆ ಪೋಷಾಕು ಧರಿಸಿದರೆ, ಒಳ್ಳೆಯದಾದೀತು ಎಂದು ಒಂದು ಕ್ಷಣವೂ ಚಿಂತಿಸಬೇಡ."

ಅಭಿವೃದ್ಧಿಗಾಗಿ ನಾವು ಮಾಡಬೇಕಾದ ಕಾರ್ಯವೆಲ್ಲ ನಮ್ಮ ಸಂಸ್ಕೃತಿಗೆ ಅನುಗುಣವಾಗಿರಬೇಕು. ನಮ್ಮ ಸಾಂಸ್ಕೃತಿಕ ನೆಲೆಯನ್ನು ನಾವು ಹೆಮ್ಮೆಯಿಂದ ಗುರುತಿಸುವಂತಿರಬೇಕು. ಐರೋಪ್ಯ ಸಂಸ್ಕೃತಿಗೆ ಹೊಂದಿಕೊಳ್ಳುವ ಅಭಿವೃದ್ಧಿ ಮಾದರಿಯನ್ನು ಎರವಲು ತಂದು, ಭಾರತದ ನೆಲದಲ್ಲಿ ಸ್ಥಾಪಿಸುವುದು ಎಂತಹ ಅಭಾಸ! ಇದು ಜಾಗತೀಕರಣದ ಹಿನ್ನೆಲೆಯಲ್ಲಿ ಯೂರೋಪಿನ ಮಾರುಕಟ್ಟೆಗೆ ಅನುಕೂಲವಾದೀತು, ಅಷ್ಟೆ. ಹಾಗೆಯೇ ಬಹುರಾಷ್ಟ್ರೀಯ ಕಂಪನಿಗಳ ಬೊಕ್ಕಸವನ್ನು ಭಾರತದ ಬಡವರ ಹಣದಿಂದ ತುಂಬುತ್ತೇವೆ. ಈ ಪ್ರಕ್ರಿಯೆಯಲ್ಲಿ ಭಾರತೀಯತೆ ಕಣ್ಮರೆಯಾಗಿ, ಪುನಃ ಕೀಳರಿಮೆಯೇ ನಮ್ಮನ್ನು ಕಾಡುತ್ತದೆ. ಸ್ವಾಮೀಜಿಯವರು ಈ ಬಗೆಯ ದಾಸ್ಯ ಮನೋಭಾವನೆಯನ್ನು ಅಂದೇ ಗುರುತಿಸಿ, ಜಪಾನೀಯರ ಉದಾಹರಣೆ ನೀಡುತ್ತ ಹೀಗೆ ಹೇಳಿದರು:

"ಜಪಾನಿನಲ್ಲಿ ನಾವು ಜ್ಞಾನದ ಸಮೀಕರಣವನ್ನು ನೋಡುತ್ತೇವೆ... ಅವರು ಐರೋಪ್ಯರಿಂದ ಎಲ್ಲವನ್ನೂ ತೆಗೆದುಕೊಂಡಿದ್ದಾರೆ. ಆದರೆ ಅದೇ ಕಾಲದಲ್ಲಿ ಜಪಾನೀಯರಾಗೇ ಉಳಿದಿದ್ದಾರೆ, ಐರೋಪ್ಯರಾಗಿಲ್ಲ. ನಮ್ಮ ದೇಶದಲ್ಲಾದರೋ ಪಾಶ್ಚಾತ್ಯನಾಗಿಬಿಡಬೇಕೆಂಬ ತೀವ್ರ ಹುಚ್ಚು ಪ್ಲೇಗಿನಂತೆ ನಮ್ಮನ್ನು ಹಿಡಿದುಕೊಂಡಿದೆ.